ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ  ದಿನಾಂಕ : DATE: 22/6/2

# ವಿಧಾನಸೌಧದ ಮೇಲೆ ಕರೊನಾ ಕರಿನೆರಳು

ವಿಜಯವಾಣಿ 22.06.20

**ಬೆಂಗಳೂರು:** ರಾಜಕೀಯ ಅಧಿಕಾರದ 'ಶಕ್ತಿ ಕೇಂದ್ರ' ವಿಧಾನ ಸೌಧದ ಮೇಲೂ ಮಾರಕ ಕರೊನಾ ಕರಿನೆರಳು ಆವರಿಸಿದ್ದು, ದೈನಂದಿನ ಕರ್ತವ್ಯಕ್ಕೆ ಹಾಜರಾಗಬೇಕಾದ ಸಿಬ್ಬಂದಿ ವರ್ಗವು ಅವ್ಯಕ್ತ ತಳಮಳದಿಂದ ಚಡಪಡಿಸಲಾರಂಭಿಸಿದೆ. ವಿಕಾಸ ಸೌಧ, ಸಿಎಂ ಗೃಹ ಕಚೇರಿ 'ಕೃಷ್ಣಾ' ಬಳಿಕ ವಿಧಾನಸೌಧಕ್ಕೂ ಸರದಿಯಂತೆ ಕರೊನಾ ಕಾಲಿಟ್ಟಿರುವುದು ನೌಕರರ ದಿಗಿಲಿಗೆ ಕಾರಣ. ವಿಧಾನ ಸೌಧದ 3ನೇ ಮಹಡಿಯಲ್ಲಿರುವ ಕಚೇರಿಯ ಹಿರಿಯ ಅಧಿಕಾರಿಯೊಬ್ಬರಿಗೆ ಸೋಂಕು ತಗುಲಿರುವುದು ಶನಿವಾರ ದೃಢಪಟ್ಟಿದೆ. ತಕ್ಷಣದಿಂದಲೇ ಎಲ್ಲ ಕೊಠಡಿಗಳು, ಮೊಗಸಾಲೆ ಸೇರಿದಂತೆ ಇಡೀ ಕಟ್ಟಡ ಸ್ವಚ್ಛಗೊಳಿಸುವ ಶುರು ಮಾಡಿದ್ದು, ಭಾನುವಾರವೂ ಮುಂದುವರಿಸಿ ಸೋಂಕು ನಿವಾರಕ ಸಿಂಪಡಿಸಲಾಗಿದೆ. ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದರೂ ಸಿಬ್ಬಂದಿಯಲ್ಲಿ ಮನೆ ಮಾಡಿದ ಕರೊನಾತಂಕ ದೂರ ವಾಗಿಲ್ಲ. ದೈನಂದಿನ ಕೆಲಸ, ಕಾರ್ಯಗಳ ನಿರ್ವಹಣೆ ಜತೆಗೆ ಸಿಬ್ಬಂದಿ ಮತ್ತು ಅವರ ಕುಟುಂಬದ ಆರೋಗ್ಯ ರಕ್ಷಣೆ ಹಿತದೃಷ್ಟಿಯಿಂದ ಸರ್ಕಾರ ಕಠಿಣ ನಿಲುವು ತಳೆಯಬೇಕೆಂಬ ಒತ್ತಡ ಹೇರಿದ್ದಾರೆ.



## ಜಿಂದಾಲ್‌ನಲ್ಲಿ 252 ಸೋಂಕಿತರು

**ಬಳ್ಳಾರಿ:** ಜಿಲ್ಲೆಯಲ್ಲಿ ಹೊಸದಾಗಿ 26 ಕರೊನಾ ಪಾಸಿಟಿವ್ ಕೇಸ್‌ಗಳು ಪತ್ತೆಯಾಗಿವೆ. ಶನಿವಾರ ತಡರಾತ್ರಿ 19 ಹಾಗೂ ಭಾನುವಾರ 7 ಮಂದಿಗೆ ಸೋಂಕು ದೃಢಪಟ್ಟಿದೆ. ಈ ಪೈಕಿ 12 ಮಂದಿ ಜಿಂದಾಲ್ ಉದ್ಯೋಗಿಗಳು. ಈ ಮೂಲಕ ಒಟ್ಟು 252 ಜಿಂದಾಲ್ ನೌಕರರಿಗೆ ಕರೊನಾ ಸೋಂಕು ತಗುಲಿದಂತಾಗಿದೆ. ಜಿಲ್ಲೆಯಲ್ಲಿ ಕರೊನಾ ಸೋಂಕಿತರ ಸಂಖ್ಯೆ 442 ಏರಿಕೆಯಾಗಿದ್ದು, 112 ಚೇತರಿಕೆಯಾಗಿದ್ದಾರೆ. ಇಬ್ಬರು ಸಾವಿಗೀಡಾಗಿದ್ದರೆ, 328 ಸಕ್ರಿಯ ಪ್ರಕರಣಗಳಿವೆ.

## ಶಿಕ್ಷಣ ಇಲಾಖೆಗೆ ಅಭಿಪ್ರಾಯ ಸಲ್ಲಿಕೆ

**ಬೆಂಗಳೂರು:** ಶಾಲೆಗಳನ್ನು ಪುನಾರಂಭಿಸುವ ವಿಚಾರವಾಗಿ ಪಾಲಕರು, ಎಸ್‌ಡಿಎಂಸಿ ಸದಸ್ಯರಿಂದ ಸಂಗ್ರಹಿಸಿದ ಅಭಿಪ್ರಾಯಗಳನ್ನು ಜಿಲ್ಲಾ ಉಪನಿರ್ದೇಶಕರು ಶಿಕ್ಷಣ ಇಲಾಖೆಗೆ ಸಲ್ಲಿಸಲು ಆರಂಭಿಸಿದ್ದಾರೆ. ಒಂದೆರಡು ದಿನಗಳಲ್ಲೇ ಎಲ್ಲ ಜಿಲ್ಲೆಗಳ ವರದಿ ಬರಲಿದ್ದು, ಅದನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲು ಇಲಾಖೆ ಮುಂದಾಗಿದೆ.